ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1503
ಸದಸ್ಯರ ಹೆಸರು : ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18.03.2021
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ನವಲಿ ಗ್ರಾಮದಲ್ಲಿ **Balancing Reservoir** ನಿರ್ಮಿಸಲು **D.P.R** ಗೆ ಆದೇಶಿಸಿದೆಯೇ;	2020-21 ರ ಆಯವ್ಯಯದಲ್ಲಿ ಸಮತೋಲನಾ ಜಲಾಶಯ ನಿರ್ಮಿಸುವ ಪ್ರಸ್ತಾವನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿಗೆ ರೂ.20.00 ಕೋಟಿ ಅನುದಾನವನ್ನು ಒದಗಿಸುವ ಬಗ್ಗೆ ಘೋಷಣೆಯಾಗಿದ್ದು, ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಸಲುವಾಗಿ ಸರ್ವೇ ಸಮೀಕ್ಷೆ ಕೈಗೊಳ್ಳಲು ರೂ.14.30 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ 16/05/2020 ರಂದು ನೀಡಲಾಗಿದೆ.
ಆ	**D.P.R** ನ ಪ್ರಗತಿ ಏನು ತಿಳಿಸುವುದು;	ತುಂಗಭದ್ರಾ ಪ್ರವಾಹ ಹರಿವು ಕಾಲುವೆಯ ವಿಸ್ತೃತ ಸರ್ವೇ ಕಾಮಗಾರಿಯು ಪೂರ್ಣಗೊಂಡಿದ್ದು, **alignment** ನ್ನು ಗುರುತಿಸಲಾಗಿದೆ. **Geo-technical investigation** ಹಾಗೂ ಸಮತೋಲನ ಜಲಾಶಯದ ಸರ್ವೇ ಕಾಮಗಾರಿಯು ಪ್ರಗತಿಯಲ್ಲಿದೆ.
ಇ	ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)	ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿ 1973 ಐ ತೀರ್ಪಿನಂತೆ ತುಂಗಭದ್ರಾ ಯೋಜನೆಗೆ ಕರ್ನಾಟಕ, ಆಂದ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಗೆ ಹಂಚಿಕೆಯಾದ ಒಟ್ಟು 230 ಟಿ.ಎಂ.ಸಿ (18 ಟಿ.ಎಂ.ಸಿ ಭಾಷ್ಪೀಕರಣ ಒಳಗೊಂಡಂತೆ ಉಪಯೋಗಿಸಕೊಳ್ಳಬೇಕಾದರೆ ಸುಮಾರು 55.28 ಟಿ.ಎಂ.ಸಿ (230-174.72) ಹೆಚ್ಚುವರಿ ಸಂಗ್ರಹಣಾ ಸಾಮರ್ಥ್ಯ ಜಲಾಶಯಗಳನ್ನು ನಿರ್ಮಿಸಲು ಆಂದ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಸಮ್ಮತಿ, ತುಂಗಭದ್ರಾ ಮಂಡಳಿಯ ಸಹಮತಿ ಮತ್ತು ಕೇಂದ್ರ ಜಲ ಆಯೋಗದ ಅನುಮೋದನೆ ಅವಶ್ಯವಾಗಿರುತ್ತದೆ. ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿದ ನಂತರ ಯೋಜನೆಯ ಕುರಿತು ಕರ್ನಾಟಕ, ಆಂದ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಜಲಸಂಪನ್ಮೂಲ ಸಚಿವರ ಮತ್ತು ಮೂರು ರಾಜ್ಯಗಳ ಮಾನ್ಯ ಮುಖ್ಯಮಂತ್ರಿಗಳ ಸಭೆ ಜರುಗಿಸಿ ಹಾಗೂ ಯೋಜನಾ ವರದಿಯನ್ನು ತುಂಗಭದ್ರಾ ಮಂಡಳಿಯ ಸಭೆಯಲ್ಲಿ ಮಂಡಿಸಿ ಮಂಡಳಿಯ ಸಹಮತಿಯನ್ನು ಪಡೆದ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಸಂಖ್ಯೆ: ಜಸಂಇ 71 ಎಂಎಲ್ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ